ವರೆಗೆ ತೊಳೆದುಕೊಳ್ಳುವ ಇರಾದೆಯೂ ಇರಲಿಲ್ಲ. ಊಟ ಮಾಡುವಾಗ ಅಪ್ಪಿ ತಪ್ಪಿ ಕೂಡಾ ಶ್ರೀಪಾದ ಶೀನಿ ಮಾವನ ಬಗ್ಗೆ ವಿಚಾರಿಸಿರಲಿಲ್ಲ. ಪ್ರಭಾವತಿಯೇ ಹುಳಿ ಪಾತ್ರೆ ಕೈಲಿ ಹಿಡಿದು ಸೌಟು ತುಂಬಿ ಗಂಡನಿಗೆ ಬಡಿಸುತ್ತಾ ವರದಿ ಒಪ್ಪಿಸಿದ್ದಳು,

"ರಾಯರ ಮನೇಲಿ ಸತ್ಯನಾರಾಯಣ ಅಂತೆ ಕಣ್ರೇ. ಮಾವಂಗೆ ಹೇಳಿಕೆ ಉಂಟು. ಇಷ್ಟು ಹತ್ರ ಇದ್ರೂ ನಾವು ಕಣ್ಣಿಗೆ ಕಾಣ್ಲಿಲ್ಲ..."

ಮೇಲೆ ಬಿದ್ದು ಯಾರೊಂದಿಗೂ ಸಲಿಗೆ ಬೆಳೆಸಿಕೊಳ್ಳದ ಮಖೇಡಿ ಗಂಡ ಇಂತಹ ಪ್ರಸಂಗಗಳಿಗೆ ಕಾರಣ ಎನ್ನುವ ಸೂಕ್ಷ್ಮ ಭರ್ತ್ಸನೆ ಮಾತಲ್ಲಿದ್ದಿದ್ದು ಶ್ರೀಪಾದನಿಗೆ ಗೊತ್ತಾಗಿರುವುದಿಲ್ಲ ಎಂದು ಅವಳ ಊಹೆ. ಅವನು ಯಾವ ಪ್ರತಿಕ್ರಿಯೆಯನ್ನೂ ತೋರಿಸದೆ ಉಂಡು ಎದ್ದು ಹೋಗಿದ್ದ.

ಅತ್ತ ಶೀನಿ ಮಾವ ಊಟದಮನೆಯಲ್ಲಿ ಉಂಡು ಹಾಗಿಂದ ಹಾಗೇ ಹೊರಟು ಹೋಗಿದ್ದ. ಮತ್ತೆ ಮನೆ ಕಡೆ ಬಂದಿರಲಿಲ್ಲ. ರಾತ್ರಿಯ ಊಟ ಸಕಾಲದಲ್ಲಿ ಮುಗಿದಿತ್ತು. ಪ್ರಭಾವತಿ ತಾನೂ ಉಂಡು, ಮುಸುರೆ ಪಾತ್ರೆ ನೆನೆಸಿಟ್ಟು, ಹಾಲಿಗೆ ಹೆಪ್ಪಿಟ್ಟು ಮಲಗಲು ಬರುವಾಗ ಗೋಡೆಯ ಕಡೆ ಮುಖ ಮಾಡಿ ಮಲಗಿದ್ದ ಶ್ರೀಪಾದನಿಗೆ ಒಂದೇ ನಿದ್ದೆ. ಹಾಗೆಂದು ಇವಳ ಊಹೆ.

★★★

ಮದರಂಗಿಯ ತಂಪಿನ ಪ್ರಭಾವದಿಂದಿರಬೇಕು, ರಾತ್ರಿ ಮಲಗಿದ ಪ್ರಭಾವತಿಗೆ ಬೆಳಗಿನವರೆಗೆ ಒಂದೇ ನಿದ್ದೆ. ದೇಹದೊಳಗಿರುವ ಅಲಾರ್ಮ್ ಗಡಿಯಾರ ದಿನದ ರೂಢಿಯಂತೆ ಐದೂವರೆಗೆ

